ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಕಛೇರಿ:080-29787088
ಇ-ಮೇಲ್:dcfrural@gmail.com

ಸಂಖ್ಯೆ:ಎ4/ಉ.ಅ.ಸಂ/KRIDE/ಸಿಆರ್-8/2022-23 ದಿನಾಂಕ: 15.07.2024

ರವರಿಗೆ,

ಅರಣ್ಯ ಸಂರಕ್ಷಣಾಧಿಕಾರಿಗಳು
(ಪ್ರಾದೇಶಿಕ), ಬೆಂಗಳೂರು

ಮಾನ್ಯರೆ,

ವಿಷಯ: Diversion of 18.6 Ha forest land in Sy No.124 of Akkupete village, Kasaba Hobli, Devanahalli taluk, Bengaluru rural district for construction of Maintenance depot of Bangalore Suburban Rail Project road in favour of Rail Infrastructure Development Company (Karnataka) Limited (KRIDE), Samparka Soudha, Dr.Rajkumar road, Rajajinagar 1st Block, Bengaluru-560010 in Proposal # FP /KA /RAIL /142190/2021.

ಉಲ್ಲೇಖ:
1. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ: ಎಫ್‌ಓಆರ್/ಸಿಆರ್/04/2021-22, ದಿನಾಂಕ 10.03.2022
2. ಈ ಕಛೇರಿ ಸಮ ಪತ್ರ ಸಂಖ್ಯೆ, ದಿನಾಂಕ: 15.02.2024
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲರ ವಿಭಾಗ, ಕೋಲಾರ ರವರ ಪತ್ರ ಸಂಖ್ಯೆ: ಎ7/ ಕಾಂಪಾ/ ಸಿಎ/ ಸಿಆರ್/ 20/ 2024-25/ 131, ದಿನಾಂಕ 01.07.2024

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮಲ್ಲಿ ಆದರಗಳೊಂದಿಗೆ ವರದಿಸುವುದೇನೆಂದರೆ Rail Infrastructure Development Company (Karnataka) Limited (KRIDE) ಸಂಸ್ಥೆಯವರು, ಅವರ FP /KA /RAIL /142190/2021 ರ ಪ್ರಸ್ತಾವನೆಯಲ್ಲಿ ರೈಲ್ವೆ ಡಿಪೋ ಸ್ಥಾಪಿಸಲು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಅಕ್ಕುಪೇಟೆ ರಾಜ್ಯ ಅರಣ್ಯ ಪ್ರದೇಶದ ಅಕ್ಕುಪೇಟೆ ಸರ್ವೆ ನಂಬರ್ 124 ರಲ್ಲಿ 18.6 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯ ತಿರುವಳಿಗೊಳಿಸಲು ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು, ಸದರಿ ಮೇಲ್ಕಂಡ ಪ್ರಸ್ತಾವನೆಯಲ್ಲಿ ಅರಣ್ಯ ತಿರುವಳಿಗೊಳ್ಳಬೇಕಾಗಿರುವ ಅರಣ್ಯ ಪ್ರದೇಶಕ್ಕೆ ಬದಲಾಗಿ ದೊಡ್ಡಬಳ್ಳಾಪುರ ತಾಲ್ಲೂಕು, ಸಾಸಲು ಹೋಬಳಿ, ಸಾಸಲು ಗ್ರಾಮ ಸರ್ವೆ ನಂಬರ್ 65 ರಲ್ಲಿ 18.6 ಹೆಕ್ಟೇರ್ (46 ಎಕರೆ) ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಉಲ್ಲೇಖಿತ ಪತ್ರ (1) ರಂತೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಹಸ್ತಾಂತರಿಸಿರುತ್ತಾರೆ.

ಮುಂದುವರೆದು, ಜಿಲ್ಲಾಧಿಕಾರಿಗಳು ಹಸ್ತಾಂತರಿಸಿರುವ ಸದರಿ ಪ್ರದೇಶವು ಇಳಿಜಾರಾಗಿದ್ದು, ಕಲ್ಲುಬಂಡೆಗಳಿಂದ ಕೂಡಿದ್ದು, ಹಾಗೂ 9600 ಮರಗಳಿಂದ ಕೂಡಿದ್ದು; ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸೂಕ್ತವಾಗಿರುವುದಿಲ್ಲ.

ಅರಣ್ಯ ಸಂರಕ್ಷಣಾ ಕಾಯ್ದೆ 1980 ಹೊಸ ನಿಯಮಗಳಂತೆ 18.6 ಹೆಕ್ಟೇರ್ ಅರಣ್ಯ ಪ್ರದೇಶವು ಅರಣ್ಯ ತಿರುವಳಿಗೊಂಡರೆ, 37.2 ಹೆಕ್ಟೇರ್ ಡಿ-ಗ್ರೇಡೆಡ್ ಅರಣ್ಯ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಬೇಕಾಗಿರುತ್ತದೆ. ಆದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಸದರಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸ್ಥಳ ಲಭ್ಯವಿಲ್ಲದ ಕಾರಣ ಬೆಂಗಳೂರು ನಗರ, ಕೋಲಾರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಅವರ ವಿಭಾಗ ವ್ಯಾಪ್ತಿಯಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು 37.2 ಹೆಕ್ಟೇರ್ (92 ಎಕರೆ) ಪ್ರದೇಶವು ಲಭ್ಯವಿದ್ದರೆ; ಸದರಿ ಅರಣ್ಯ ಪ್ರದೇಶದ ದಾಖಲಾತಿಗಳನ್ನು ಉಲ್ಲೇಖಿತ ಪತ್ರ (2) ರಲ್ಲಿ ಉಲ್ಲೇಖಿಸಿರುವಂತೆ, ಈ ಕಛೇರಿಗೆ ಸಲ್ಲಿಸುವಂತೆ ಕೋರಲಾಗಿತ್ತು.

Scanned with ACE Scanner